ಆ) ವಿಲೇಗಾಗಿ ಲಭ್ಯವಾಗುವ ಹೆಚ್ಚುವರಿ ಜಮೀನನ್ನು ಈಗಾಗಲೇ 75 ಶೇಕಡ ಈ ಜನಾಂಗದವರಿಗೆ ಹಂಚಲು ನಿರ್ಧರಿಸಿರುವುದರಿಂದ, ಇನ್ನೂ ಹೆಚ್ಚಿಸುವ ಪ್ರಸ್ತಾವನೆ ಯಾವುದೂ ಪರಿಶೀಲನೆಯಲ್ಲಿಲ್ಲ.

ಸರ್ಕಾರಿ ಸ್ವಾಮ್ಯದ ಲಿಡ್ಕರ್‌ನಲ್ಲಿನ ಅವ್ಯವಹಾರ

570-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಸ್ವಾಮ್ಯದ ಲಿಡ್ಕರ್ ಸಂಸ್ಥೆಯು ಯಾವಾಗ ಪ್ರಾರಂಭವಾಯಿತು?

ಆ) ಆದರಲ್ಲಿ ತೊಡಗಿಸಲಾಗಿರುವ ಬಂಡವಾಳವೆಷ್ಟು? ಹಾಗೂ ಆದರ ಚಟುವಟಿಕೆಗಳೇನು?

ಇ) ಆದು ಪ್ರಾರಂಭಗೊಂಡ ನಂತರದಿಂದ ಇಲ್ಲಿಯವರೆಗೆ ಯಾವ ಯಾವ ವರ್ಷಗಳಲ್ಲಿ ಲಾಭಪಡೆದಿದೆ ಹಾಗೂ ನಷ್ಟವನ್ನು ಅನುಭವಿಸಿದೆ?

ಈ) ಇತ್ತೀಚೆಗೆ ಆ ಸಂಸ್ಥೆಯಲ್ಲಿ ಕೆಲವು ಅವ್ಯವಹಾರಗಳು ಪತ್ತೆಯಾಗಿರುವುದು ನಿಜವೇ?

ಉ) ಹಾಗಿದ್ದಲ್ಲಿ, ಸರ್ಕಾರ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಊ) ಆ ಸಂಸ್ಥೆಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಉದ್ದೇಶವಿದೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಲಿಡ್ಕರ್ ಸಂಸ್ಥೆಯು ಅಕ್ಟೋಬರ್ 1976ರಲ್ಲಿ ಪ್ರಾರಂಭವಾಯಿತು.

ಆ) ಸರ್ಕಾರವು ಇದುವರೆವಿಗೂ ತೊಡಗಿಸಿರುವ ಒಟ್ಟು ಬಂಡವಾಳ ರೂ. 138.67ಲಕ್ಷಗಳಾಗಿರುತ್ತದೆ. ಈ ನಿಗಮದ ಮುಖ್ಯ ಚಟುವಟಿಕೆಗಳು ಈ ಕೆಳಕಂಡಂತಿದೆ:

1) ಕರ್ನಾಟಕ ರಾಜ್ಯದಲ್ಲಿರುವ ಚರ್ಮ ಕುಶಲಕರ್ಮಿಗಳಿಗೆ ಮತ್ತು ಚರ್ಮೋದ್ಯಮದಲ್ಲಿ ತೊಡಗಿಸಿರುವ ಸಣ್ಣ ಪ್ರಮಾಣ ಘಟಕಗಳಿಗೆ ಮಾರುಕಟ್ಟೆ ಸಹಾಯ ಒದಗಿಸುವುದು.

2) ವಿವಿಧ ಯೋಜನೆಗಳಡಿಯಲ್ಲಿ ಚರ್ಮ ಕುಶಲ ಕರ್ಮಿಗಳಿಗೆ ಸೌಲಭ್ಯಗಳನ್ನು ಒದಗಿಸುವುದು.

3) ರಾಜ್ಯದಲ್ಲಿನ ಚರ್ಮೋದ್ಯಮದ ಬೆಳವಣಿಗೆಗೆ ಸಹಾಯ ಮಾಡುವುದು.

ಇ) ಲಿಡ್ಕರ್ ಸಂಸ್ಥೆಯು ಪ್ರಾರಂಭಗೊಂಡ ನಂತರದಿಂದ ಇಲ್ಲಿಯವರೆಗೂ ಯಾವ ಪಕ್ಷದಲ್ಲಿಯೂ ಲಾಭಗಳಿಸಿರುವುದಿಲ್ಲ. ಈ ಸಂಸ್ಥೆಯು 1991-92ನೇ ಸಾಲಿನವರೆಗೆ ಅನುಭವಿಸಿರುವ ಒಟ್ಟು ನಷ್ಟವು ರೂ. 446-00 ಲಕ್ಷಗಳಾಗಿರುತ್ತದೆ.

ಈ) ಕಂಟ್ರೋಲರ್, ಸ್ಟೇಟ್ ಆಕೌಂಟ್ಸ್ ಡಿಪಾರ್ಟ್‌ಮೆಂಟ್ ಇವರ 1987-88ರಿಂದ 1990-91ರ ಕ್ರೆಡಿಟ್ ವರದಿಯಲ್ಲಿ ಕೆಲವು ಲೋಪದೋಷಗಳನ್ನು ವರದಿ ಮಾಡಿದ್ದಾರೆ.

ಉ) ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಊ) ಈ ನಿಗಮವು ಖಾಸಗೀಕರಣ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕುಡುಬ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ

500 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?